ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಕೆಳಕಂಡ ಸೌಲಭ್ಯಗಳನ್ನು ನಮಗೆ ಕೂಡಲೇ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇವೆ.

1. 80 ಅಡಿ ರಸ್ತೆಯಲ್ಲಿರುವ ಕರ್ನಾಟಕ ಪ್ರಾವಿಷನ್ ಸ್ಟೋರ್ಸ್ ಮುಂದುಗಡೆ ಜೀಬ್ರಾ ಕ್ರಾಸಿಂಗ್ ಹಾಕಿಸುವುದು.

2. 80 ಅಡಿ ರಸ್ತೆಯಲ್ಲಿ ಬಹಳಷ್ಟು ವಾಹನಗಳು ಓಡಾಡುವುದರಿಂದ ಹಾಗೂ ಅಡ್ಡ ರಸ್ತೆಗಳು ಇರುವುದರಿಂದ ರೋಡ್ ಹಂಪ್‌ಗಳನ್ನು ಹಾಕಿಸುವುದು.

3. ಶಾಲೆಯ ವೇಳೆಯಲ್ಲಿ ಮಕ್ಕಳು ರಸ್ತೆಯನ್ನು ದಾಟಲು ಅನುಕೂಲವಾಗುವಂತೆ, ಹಾಗೂ ಇದೇ ವೇಳೆಯಲ್ಲಿಯೇ ಕಛೇರಿಯ ಬಸ್ಸುಗಳು ಓಡಾಡುವುದರಿಂದ ವಾಹನಗಳನ್ನು ನಿಯಂತ್ರಿಸಲು ಹಾಗೂ ಮಕ್ಕಳು ಸುಲಭವಾಗಿ ರಸ್ತೆಯನ್ನು ದಾಟಲು ಸಂಚಾರಿ ಪೋಲೀಸರನ್ನು ನೇಮಿಸುವುದು.

4. ಭಾಷ್ಯಮ್ ವೃತ್ತದಿಂದ ಪ್ರಸನ್ನಾದ ಕಡೆ ಬರುವಾಗ ಮತ್ತೊಂದು ವೃತ್ತವು ಇದ್ದು ಅದನ್ನು ದಾಟುವಾಗ ಅಪಘಾತವಾಗುವ ಸಂಭವವಿರುವುದರಿಂದ, ಕ್ಷೇಮದ ದೃಷ್ಟಿಯಿಂದ ಹಂಪ್‌ಗಳನ್ನು ಹಾಕಿಸುವುದು.

5. 75ನೇ ಕ್ರಾಸ್ ಮುಂದೆ ಇರುವ ಬಸ್ ನಿಲ್ದಾಣದ ಹತ್ತಿರ ಆಟೋರಿಕ್ಷಾಗಳು ನಿಲ್ಲದಂತೆ ತಡೆಯುವುದು.

6. 75ನೇ ಕ್ರಾಸ್‌ಗೆ (80 ಅಡಿ ರಸ್ತೆಯಲ್ಲಿರುವ) ಸಂಬಂಧಿಸಿದಂತೆ ಇರುವ ಹಾಲಿನ ಬೂತನ್ನು ಸ್ಥಳಾಂತರಿಸುವುದು.

ಈ ಮೇಲ್ಕಂಡ ಎಲ್ಲಾ ಸೌಲಭ್ಯಗಳು ನಾಗರೀಕರಿಗೆ ಅತ್ಯಂತ ಅವಶ್ಯಕವಾಗಿರುವುದರಿಂದ ಈ ಕೂಡಲೇ ಎಲ್ಲಾ ಸೌಲಭ್ಯಗಳನ್ನು ನಮಗೆ ಕಲ್ಪಿಸಿಕೊಡಬೇಕೆಂದು ಮತ್ತೊಮ್ಮೆ ಕೋರುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು.

(2) ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆಯ ನಿರ್ಮಾಣ ಕಾರ್ಯ ಕುರಿತು.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕು ಸಾತನೂರು ಹೋಬಳಿ ಹರಿಹರ ಕೆರೆ ನಿರ್ಮಾಣ ಕಾರ್ಯ ಪೂರ್ಣಗೊಂಡು ಸುಮಾರು ಹತ್ತು ವರ್ಷಗಳೇ ಕಳೆದಿದ್ದು ಈ ತನಕ ಒಮ್ಮೆಯೂ ಈ ಕೆರೆ ತುಂಬಿಲ್ಲ. ಕೆಳೆಗೆ ಹೆಚ್ಚುವರಿ ನೀರನ್ನು ಹರಿಸುವ ದೃಷ್ಟಿಯಿಂದ ಕಿತ್ತಳೆ ಹಳ್ಳಕ್ಕೆ ಅಡ್ಡಲಾಗಿ ಅಣೆಕಟ್ಟು ಕಟ್ಟಿಸಿ, ಅಲ್ಲಿಂದ ಫೀಡ್ ಚಾನಲ್ ಮೂಲಕ ಕೆರೆಗೆ ನೀರನ್ನು ಹರಿಸಲು ತಯಾರಿಸಲಾಗಿದ್ದ ಯೋಜನೆಯ ಅನುಷ್ಠಾನ ಯಾವಾಗ ಮಾಡಲಾಗುತ್ತದೆ ಎಂಬುದರ ಬಗ್ಗೆ ಸರ್ಕಾರದ ವತಿಯಿಂದ ತಿಳಿಯಬಯಸುತ್ತಾ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸಿ.ಎಂ. ಲಿಂಗಪ್ಪನವರ ಪ್ರಶ್ನೆಗೆ ಬೆಂಗಳೂರು ಜಿಲ್ಲಾಪರಿಷತ್ತಿನಿಂದ ಸರಿಯಾದ ಮಾಹಿತಿ ದೊರಕಿಲ್ಲ. ಆಫೀಸರ್‌ಗಳೂ ಈಗಾಗಲೇ ಕಾಂಟಾಕ್ಟ್ ಮಾಡಿದ್ದಾರೆ. ಮಾಹಿತಿ ಬಂದ ಕೂಡಲೇ ಉತ್ತರ ಓದಗಿಸಿಕೊಡುತ್ತೇವೆ.

(ಮಾನ್ಯ ಸದಸ್ಯರಾದ ಡಾ, ಆರ್.ಬಿ. ಚೌದರಿಯವರು ಸದನದಲ್ಲಿ ಗೈರು ಹಾಜರಾಗಿದರು)